**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ.**

ಸಿ.ಸಿ. ನಂ- 49/2024

Dw-1

ದಿನಾಂಕಃ 06-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ. P P N ಆರೋಪಿ ಪರ ವಕೀಲರಿಂದ-** ನನಗೆ ಫಿರ್ಯಾದಿ ಪರಿಚಯ ಇದೆ. ಫಿರ್ಯಾದಿಯೊಂದಿಗೆ ರೂ. 50,000/- ವ್ಯವಹಾರವಾಗಿದೆ. ನನ್ನ ಮನೆಯ ಅಡಚಣೆಯ ಸಲುವಾಗಿ ಫಿರ್ಯಾದಿ ಕಡೆಯಿಂದ ಸಾಲವನ್ನು ಪಡೆದಿದ್ದೆ. ಸಾಲದ ಹಣದ ಭದ್ರತೆಗಾಗಿ ನಾನು ಖಾಲಿ ಚೆಕ್ಕನ್ನು ಫಿರ್ಯಾದಿಗೆ ನೀಡಿದ್ದೆ. ನಾನು ಖಾಲಿ ಚೆಕ್ಕ ಮಾತ್ರ ನೀಡಿದ್ದೆ. ಸಹಿ ಮಾಡಿ ನೀಡಿದ್ದೆ. ನಾನು ಫಿರ್ಯಾದಿ ಕಡೆಯಿಂದ ಸದರಿ ಕೈಗಡ ಸಾಲದ ಹಣವನ್ನು ನಾಗೇಶ ಬಿರಾದಾರ ಇವರ ಸಮಕ್ಷಮ ಅವರ ಮನೆಯಲ್ಲಿ 2022 ರ ನವೆಂಬರ ತಿಂಗಳಲ್ಲಿ ಪಡೆದಿರುತ್ತೇನೆ. ನಾನು ಕೈಗಡ ಸಾಲ ಮರುಪಾವತಿಸಿದ ನಂತರ ಚೆಕ್ಕ ವಾಪಸ ನೀಡುವುದಾಗಿ ಮಾತಾಗಿತ್ತು. ನಾನು ಡಿಸೆಂಬರ ತಿಂಗಳಲ್ಲಿ ಹಣವನ್ನು ಬಡ್ಡಿ ಸಮೇತ ಮರುಪಾವತಿಸಿದ್ದು ಫಿರ್ಯಾದಿ ಚೆಕ್ಕನ್ನು ಮನೆಯಲ್ಲಿ ಬಿಟ್ಟು ಬಂದಿದ್ದೇನೆ ಎಂದು ಹೇಳಿದ್ದರು. ಫಿರ್ಯಾದಿ ಬಡ್ಡಿ ವ್ಯಾಪಾರ ಮಾಡುತ್ತಾನೆ. 2023 ರಲ್ಲಿ ಫಿರ್ಯಾದಿಯೊಂದಿಗೆ ರೂ.6,50,000/- ಹಣದ ವ್ಯವಹಾರವಾಗಿತ್ತು. ನಾನು ಚೆಕ್ಕ ಮೇಲೆ ಈ ಮೊತ್ತವನ್ನು ಬರೆದಿಲ್ಲ. ಫಿರ್ಯಾದಿಯೆ ಬರೆದುಕೊಂಡಿರುತ್ತಾರೆ. ಚೆಕ್ಕನಲ್ಲಿ ನನ್ನ ಕೈಬರಹ ಇಲ್ಲ. ನಾನು ನನ್ನ ಖಾತೆಯಲ್ಲಿ ಹಣ ಇದೆ ಎಂದು ಚೆಕ್ಕ ನೀಡಿಲ್ಲ. ಫಿರ್ಯಾದಿ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ. ಎಸ ಸಿ ಕೆ ಫಿರ್ಯಾದಿ ಪರ ವಕೀಲರಿಂದ-**

ಪಾಟಿ ಸವಾಲಿಗೆ ಕಾಲವಕಾಶ ಕೇಳಿದ್ದು ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

ಸಹಿ/-

ಹೆಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.